ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

9

ಶಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ - ಹಕ್ಕುಚ್ಯುತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 19/3/21

## ಸದನದಲ್ಲಿ ಸಂಗಮೇಶ್ ಅಂಗಿ ಬಿಚ್ಚಿದ ಪ್ರಕರಣ | ಸಭಾಧ್ಯಕ್ಷ ಕಾಗೇರಿ ಆದೇಶ

# ಹಕ್ಕುಚ್ಯುತಿ ಸಮಿತಿಗೆ ತನಿಖೆ ಹೊಣೆ

19/3/21

ಸಂ.ಕ. ಸಮಾಚಾರ ಬೆಂಗಳೂರು

ಭದ್ರಾವತಿ ಕಾಂಗ್ರೆಸ್ ಶಾಸಕ ಬಿ.ಕೆ ಸಂಗಮೇಶ್ ಅವರು ಸದನದಲ್ಲಿ ತೋರಿದ ಅಶಿಸ್ತು ಹಾಗೂ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿರುವ ಪ್ರಕರಣದ ತನಿಖೆಯ ಹೊಣೆಯನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಆದೇಶ ಹೊರಡಿಸಿದ್ದಾರೆ.

ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಶಾಸಕ ಬಿ.ಕೆ ಸಂಗಮೇಶ್ ಕಲಾಪದಲ್ಲಿ ಅಂಗಿಬಿಚ್ಚಿದ ಪ್ರಕರಣದ ಕುರಿತು, ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ತೀವ್ರ ಜಟಾಪಟಿ ನಡೆದು ಕೋಲಾಹಲ ವಾತಾವರಣ ನಿರ್ಮಾಣವಾಯಿತು..

ಒಂದು ದೇಶ ಒಂದು ಚುನಾವಣೆ ಚರ್ಚೆಯ ವೇಳೆ ಕಾಂಗ್ರೆಸ್ ಅನುಸರಿಸಿದ ನಡೆ ಹಾಗೂ ಶಾಸಕ ಸಂಗಮೇಶ್ ವರ್ತನೆಯಿಂದ ಸಭಾಧ್ಯಕ್ಷರ ಪೀಠದ ಅಗೌರವದ ಮೂಲಕ ಹಕ್ಕುಚ್ಯುತಿ ಆಗಿದೆ ಎಂದು ಹಕ್ಕುಚ್ಯುತಿ ಮಂಡನೆ ಮಾಡಲು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅನುಮತಿ ಕೋರಿದರು. ಶಾಸಕರು ದುರ್ವರ್ತನೆ ತೋರಿದ್ದು, ಅವರನ್ನು ಪೂರ್ಣ ಅಧಿವೇಶನದಿಂದಲೇ ಅಮಾನತು ಮಾಡಬೇಕು ಎಂದು ಜ್ಞಾನೇಂದ್ರ ಆಗ್ರಹಿಸಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ತಮಗಾದ ಅನ್ಯಾಯವನ್ನು ಸದನದ ಗಮನಕ್ಕೆ ತರುವ ಉದ್ದೇಶದಿಂದ ಸಂಗಮೇಶ್ ಆ ರೀತಿ

- ವಿಧಾನಸಭೆಯಲ್ಲಿ ಪ್ರತಿಪಕ್ಷ ಕಾಂಗ್ರೆಸ್ ಧರಣಿ
- ವಿಷಯ ಪ್ರಸ್ತಾಪಕ್ಕೆ ನಿಯಮದಡಿ ಅವಕಾಶ



ವರ್ತಿಸಿದ್ದಾರೆ ಎಂದು ಸಮರ್ಥಿಸಿಕೊಂಡರು.ಈ ಹಿಂದೆ ಗೂಳಿಹಟ್ಟಿ ಶೇಖರ್ ಕೂಡ ಸದನದಲ್ಲಿ ತಮ್ಮ ಅಂಗಿ ಬಿಚ್ಚಿದ್ದರು. ಆ ಸಂದರ್ಭದಲ್ಲಿ ಅವರನ್ನು ಅಮಾನತು ಮಾಡಲಿಲ್ಲ .ಈಗೇಕೆ ಅಮಾನತು ಕ್ರಮ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಶಾಸಕರು ಸದನದಲ್ಲಿ ನಿಮ್ಮ ಬಗ್ಗೆ ಮಾತನಾಡಿಲ್ಲ. ಅವರಿಲ್ಲ ಹಾಜರಾಗಿಲ್ಲ . ಹೀಗಿದ್ದರೂ ಹಕ್ಕು ಚ್ಯುತಿಗೆ ಅವಕಾಶ ಹೇಗೆ ಕೊಡುತ್ತೀರಿ ಎಂದು ಸಿದ್ದರಾಮಯ್ಯ ಆಕ್ಷೇಪಿಸಿದರು. ಈ ಸಂದರ್ಭ ಮಧ್ಯಪ್ರವೇಶಿಸಿದ ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸುವುದು ಸೂಕ್ತ ಎಂದರು. ಇದರಿಂದ ಕೆರಳಿದ ಕಾಂಗ್ರೆಸ್ ಸದಸ್ಯರು, ಸದನದ ಬಾವಿಗಿಳಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು.

ತೀವ್ರ ಗದ್ದಲದ ನಡುವೆಯೇ ಸ್ಪೀಕರ್ ಕಾಗೇರಿ ಅವರು ಸಂಗಮೇಶ್ ಪ್ರಕರಣದ ತನಿಖೆಯನ್ನು ಸದನದ ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಲಾಗಿದೆ. ತನಿಖೆ ನಡೆದು ಸದನಕ್ಕೆ ವರದಿ ಮಂಡನೆಯಾಗಲಿದೆ ಎಂದು ಆದೇಶ ಹೊರಡಿಸಿದರು.

### ಸ್ಪೀಕರ್ ಕೆಂಡ

ನಿಯಮದಲ್ಲಿ ಹಕ್ಕುಚ್ಯುತಿ ಮಂಡನೆಗೆ ಅವಕಾಶವಿದೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಪದೇ ಪದೇ ಕಾಂಗ್ರೆಸ್ ಸದಸ್ಯರಲ್ಲಿ ಸಭಾಧ್ಯಕ್ಷ ಕಾಗೇರಿ ಅವರು ಮಾಡಿದ ಮನವಿಗೆ ಪುರಸ್ಕಾರ ಸಿಗದಿದ್ದಾಗ ಒಂದು ಹಂತದಲ್ಲಿ ಕೆರಳಿದರು. ಹತ್ತಾರು ವರ್ಷ ಸದನದ ಅನುಭವವಿರುವ ನೀವೇ ಹೀಗೆ ಮಾಡಿದರೆ ಹೇಗೇ? ಎಂದು ಪ್ರತಿಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಕುರಿತು ಏರು ಧ್ವನಿಯಲ್ಲೇ ಹೇಳಿದರು. ನಿಮ್ಮ ರಾಜಕಾರಣವನ್ನು ಹೊರಗಿಟ್ಟುಕೊಳ್ಳಿ ಎಂದು ಖಾರವಾಗಿ ಹೇಳಿದರಲ್ಲದೆ, ಯಾವುದೇ ರೀತಿಯ ಅಡ್ಡಿ ಆತಂಕಗಳು ಎದುರಾದರೂ ಪೀಠದ ಗೌರವ ಕಾಪಾಡಲು ಬದ್ಧವಾಗಿರುತ್ತೇನೆಂದು ಘೋಷಿಸಿದರು.